ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ
ಕೆ ಆರ್ ನಗರ.

**ಸಿಸಿ ನಂ. 598/2023**

ಪಿರ್ಯಾದುದಾರರುಃ ಸರ್ಕಾರದ ಪರ ಕೆ ಆರ್ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು:
1. ಸ್ವಾಮಿ ಬಿನ್ ಜವರೇಗೌಡ,
35 ವರ್ಷ,
2. ನಂಜೇಗೌಡ ಬಿನ್ ಜವರೇಗೌಡ,
32 ವರ್ಷ,
ಇಬ್ಬರ ವಾಸಃ ದೆಗ್ಗನಹಳ್ಳಿ ಗ್ರಾಮ,
ಕೆ.ಆರ್.ನಗರ ತಾಲ್ಲೂಕು.

**ದೋಷಾರೋಪಣೆ**

ಶ್ರೀಮತಿ ಪವಿತ್ರ ಆರ್. ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೆ ಆರ್ ನಗರ ಆದ ನಾನು ಈ ಕೆಳಗಿನಂತೆ ಅಪರಾಧವನ್ನು ನೀವು ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ದಿಃ 17.06.2023 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದ, ದೆಗ್ಗನಹಳ್ಳಿ ಗ್ರಾಮದ ಶ್ರೀ ಕರಿಯಮ್ಮ ದೇವರ ದೇವಸ್ಥಾನದ ರಸ್ತೆಯಲ್ಲಿ ದಿಃ 16.06.2023 ರಂದು ರಾತ್ರಿ ನಡೆದಿದ್ದ ಮಾತುಕತೆ ವಿಚಾರದಲ್ಲಿ ಗ್ರಾಮದ ಯಜಮಾನರುಗಳು ನ್ಯಾಯ ಪಂಚಾಯ್ತಿ ಮಾಡುತ್ತಿರುವಾಗ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ 1 ಗಾಯಿತ್ರಿ, 2 ಸುಮಾ, 3 ಕುಬೇರ ಮತ್ತು 4 ಶಿವಕುಮಾರ ರವರ ಮೇಲೆ ಗಲಾಟೆ ಮಾಡಿ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ

34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವುಗಳು ಚಾಸಾ 1 ರಿಂದ 4 ರವರನ್ನು ಅಡ್ಡಗಟ್ಟಿ ಅಕ್ರಮ ತಡೆಯುಂಟು ಮಾಡಿರುತ್ತೀರಿ. ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಆರೋಪಿತರಾದ ನೀವುಗಳು ಚಾಸಾ 1 ರಿಂದ 4 ರವರನ್ನು ಅಡ್ಡಗಟ್ಟಿ ನಿಮ್ಮದು ಜಾಸ್ತಿ ಆಯಿತು ಊರಲ್ಲಿ ಎಂದು ಬಾಯಿಗೆ ಬಂದಂತೆ ಬೈಯುತ್ತಿದ್ದಾಗ ಜಗಳ ಬಿಡಿಸಲು ಬಂದ ಚಾಸಾ 2 ಮತ್ತು 3 ರವರ ಮೇಲೂ ಗಲಾಟೆ ಮಾಡಿ 2 ನೇ ಆರೋಪಿಯಾದ ನೀವು ಚಾಸಾ 4 ರವರನ್ನು ಕೊರಳ ಪಟ್ಟಿ ಹಿಡಿದುಕೊಂಡು ಕೆಳಗೆ ಬೀಳಿಸಿಕೊಂಡು ಕಾಲಿನಿಂದ ತುಳಿದು ಕೈಗಳಿಗೆ ಮೈಕೈಗೆ ಹೊಡೆದು ಒಳನೋವುಂಟು ಮಾಡಿದ್ದು ಚಾಸಾ 3 ರವರಿಗೆ ಬಲಕೈಗೆ ಹೊಡೆದು ನೋವುಂಟು ಮಾಡಿರುತ್ತೀರಿ. ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ನಿಮ್ಮಗಳನ್ನು ಸುಮ್ಮನೆ ಬಿಡುವುದಿಲ್ಲ ಎಂದು ಚಾಸಾ 1 ಮತ್ತು ಅವರ ಕಡೆಯವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ. ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿಃ 03.04.2024

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಕೆ ಆರ್ ನಗರ.